**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 12-06-2024.**

**ಮುಂದುವರೆದ ಪಾಟೀ ಸವಾಲು - ಪ್ರತಿವಾದಿಗಳ ಪರ ವಕೀಲರಿಂದ :**

**1)** 1997 ರ ವಿಭಾಗ ಮುನಿಯಪ್ಪ, ನಾರಾಯಣಪ್ಪ, ರಾಜಣ್ಣ ಅವರ ಮಧ್ಯೆ ಆಗಿರುತ್ತದೆ. ಸದರಿ ವಿಭಾಗದ ಬಗ್ಗೆ ಪೂರಕ ದಾಖಲೆ ನಿ.ಪಿ.4 ಆಗಿರುತ್ತದೆ. ದಾವಾಸ್ವತ್ತು ಮಾರಾಟ ಆಗಿದ್ದರೂ ಸಹ ನಿ.ಪಿ.4 ನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆಂಜಿನಪ್ಪ ಅವರಿಗೆ ಒಟ್ಟು ನಾಲ್ಕು ಜನ ಮಕ್ಕಳು. ಅವರಿಗೆ ಒಬ್ಬರು ಮಗ ಹಾಗೂ ಮೂರು ಜನ ಹೆಣ್ಣು ಮಕ್ಕಳು. ದಾವಾಸ್ವತ್ತು 1965 ರಲ್ಲಿ ನಿ.ಪಿ.33 ರ ಪ್ರಕಾರ ಕ್ರಯ ಆಗಿದ್ದರೂ ಸಹ 2018 ರಲ್ಲಿ ನಾವು ದಾವೆ ಸಲ್ಲಿಸಿದ್ದು, ಈ ದಾವೆ ಕಾಲ ಪರಿಮಿತಿ ಕಾಯ್ದೆಯಡಿ ನಿಲ್ಲತಕ್ಕದ್ದಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 763/2007 ನ್ನು ನಮ್ಮ ತಂದೆ ವಾಪಸ್ಸು ಪಡೆಯುವಾಗ ಕೇವಲ ಶಾಶ್ವತ ನಿರ್ಬಂಧಕಾಜ್ಞೆಯನ್ನು ಮಾತ್ರ ಮುಂದುವರೆಸುತ್ತೇನೆ, ದಾವಾಸ್ವತ್ತಿನ ಹಕ್ಕಿನ ಬಗ್ಗೆ ಮುಂದುವರೆಸುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.33 ಮತ್ತು ನಿ.ಪಿ.33(ಎ) ದಲ್ಲಿ ಬರೆದ ವಿಚಾರಗಳು ಸರಿಯಾಗಿ ಇವೆ ಎಂದರೆ ಸರಿಯಲ್ಲ. ನಿ.ಪಿ.33 ರಲ್ಲಿ ನಮೂದಿಸಿದ ಮುನೇಪ್ಪ ಅಲಿಯಾಸ್ ಮುನಿಯಪ್ಪ ಎಂದರೆ ನಮ್ಮ ತಾತ ಎಂದರೆ ಸರಿಯಲ್ಲ. ನಿ.ಪಿ.33 ನ್ನು ಬರೆಯುವ ಸಮಯದಲ್ಲಿ ಚಿಕ್ಕಮುನಿಶಾಮಪ್ಪ ಅವರು ಜೀವಂತ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಚಿಕ್ಕಮುನಿಶಾಮಪ್ಪ ಅವರು 1965 ಕ್ಕಿಂತ ಪೂರ್ವದಲ್ಲಿ ಮರಣ ಹೊಂದಿದ್ದರೂ ಸಹ ನಿ.ಪಿ.22 ರ ಪ್ರಕಾರ ಅವರು 1971 ರಲ್ಲಿ ಮರಣ ಹೊಂದಿದ್ದಾರೆ ಎಂದು ಸುಳ್ಳು ದಾಖಲೆಯನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.22 ನ್ನು 42 ವರ್ಷಗಳ ನಂತರ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಚಿಕ್ಕಮುನಿಶಾಮಪ್ಪ ಅವರ ಮರಣದ ಬಗ್ಗೆ ನೋಂದಣಿ ಇರುವುದಿಲ್ಲ, ಆದ್ದರಿಂದ ಆ ಬಗ್ಗೆ ನೋಂದಣಿ ಮಾಡಿಸಲು ಅನುಮತಿ ನೀಡಬೇಕು ಎಂದು ಯಾವುದೇ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೆವು ಎಂದರೆ ಹೌದು ಎಂದು ನುಡಿಯುತ್ತೇನೆ. ಸದರಿ ಪ್ರಕರಣ ದಾಖಲಿಸಿದ ಬಗ್ಗೆ ಹಾಗೂ ಆ ಬಗ್ಗೆ ಆದೇಶ

ಇರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಬಹುದು. ನಾವು ಅಂತಹ ಯಾವುದೇ ಪ್ರಕರಣವನ್ನು ದಾಖಲಿಸಿರುವುದಿಲ್ಲ ಹಾಗೂ ಯಾವುದೇ ಆದೇಶ ಆಗಿರುವುದಿಲ್ಲ, ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.33 ರ ಪ್ರಕಾರ ನಮ್ಮ ತಾತ ಮುನಿಯಪ್ಪ ಅವರು 1 ನೇ ಪ್ರತಿವಾದಿಯ ಗಂಡನಿಗೆ ರೂ.475/- ಕ್ಕೆ ಕ್ರಯಪತ್ರವನ್ನು ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ನಿ.ಪಿ.33 ರ ಪ್ರಕಾರ 1 ನೇ ಪ್ರತಿವಾದಿಯ ಗಂಡ ಹಾಗೂ ಅವರ ಕುಟುಂಬದವರು ದಾವಾಸ್ವತ್ತಿನ ಸ್ವಾಧೀನವನ್ನು ಪಡೆದು ಈವತ್ತಿನವರೆಗೂ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ.33 ರ ಪ್ರಕಾರ ಎಂ.ಆರ್.ಸಂಖ್ಯೆ 10/1997-98 ರಂತೆ 1 ನೇ ಪ್ರತಿವಾದಿಯ ಗಂಡ ಮುನಿಶಾಮಪ್ಪ ಅವರ ಹೆಸರಿಗೆ ದಾವಾಸ್ವತ್ತಿನ ಬಗ್ಗೆ ಖಾತೆ ಬದಲಾವಣೆ ಆಗಿದೆ ಎಂದರೆ ಪ್ರತಿವಾದಿಗಳು ತಮ್ಮ ಪ್ರಭಾವ ಬೀರಿ ಸದರಿ ದಾಖಲೆಯನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ನುಡಿಯುತ್ತೇನೆ. ಅದರಂತೆ ಪಹಣಿ ಪತ್ರಿಕೆಯಲ್ಲಿ ಕಾಲಂ ಸಂಖ್ಯೆ 9 ಮತ್ತು 12 ರಲ್ಲಿ 1 ನೇ ಪ್ರತಿವಾದಿಯ ಗಂಡನ ಹೆಸರು ಕಂಡುಬರುತ್ತದೆ ಎಂದರೆ ಅದು ಸುಳ್ಳು ದಾಖಲೆ ಎಂದು ನುಡಿಯುತ್ತೇನೆ. ಗಣಕೀಕೃತ ಪಹಣಿ ಪತ್ರಿಕೆಗಳು ಬಂದ ನಂತರ 1 ನೇ ಪ್ರತಿವಾದಿಯ ಗಂಡನ ಹೆಸರಿನ ಬದಲಾಗಿ ಮುನೇಪ್ಪ ಎಂದು ಪಹಣಿ ಪತ್ರಿಕೆಗಳಲ್ಲಿ ತಪ್ಪಾಗಿ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಉಪವಿಭಾಗಾಧಿಕಾರಿಗಳು ದಿ.10-04-2007 ರಂದು ಆದೇಶ ಮಾಡಿ ಸದರಿ ಪಹಣಿ ಪತ್ರಿಕೆಯಲ್ಲಿ ತಿದ್ದುಪಡಿ ಮಾಡಿ 1 ನೇ ಪ್ರತಿವಾದಿಯ ಗಂಡನ ಹೆಸರಿನ್ನು ನಮೂದು ಮಾಡಲು ಆದೇಶಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆದೇಶದ ಪ್ರಕಾರ ತಹಶೀಲ್ದಾರ್ ರವರು ಪ್ರಕರಣ ಸಂಖ್ಯೆ 130/2006-07 ರಂತೆ ಪುನಃ 1 ನೇ ಪ್ರತಿವಾದಿಯ ಗಂಡನ ಹೆಸರನ್ನು ಪಹಣಿ ಪತ್ರಿಕೆಯಲ್ಲಿ ನಮೂದಿಸಿದರು ಎಂದರೆ ಸರಿಯಲ್ಲ. ಮುನಿಶಾಮಪ್ಪ ಅವರ ಮರಣಾನಂತರ 1 ಮತ್ತು 2 ನೇ ಪ್ರತಿವಾದಿಗಳ ಹೆಸರಿಗೆ ಎಂ.ಆರ್.ಸಂಖ್ಯೆ 30/2007-08 ರಂತೆ ಪಹಣಿ ಪತ್ರಿಕೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆದೇಶದ ಬಗ್ಗೆ ನಮ್ಮ ತಂದೆ ಮೇಲ್ಮನವಿ ಸಂಖ್ಯೆ 110/2007-08 ರಂತೆ ಪ್ರಶ್ನೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ 1 ನೇ ಪ್ರತಿವಾದಿಯ ವಿಳಾಸವನ್ನು ಚಾಮರಾಜಪೇಟೆ, ಬೆಂಗಳೂರು ಎಂದು ಸುಳ್ಳು ವಿಳಾಸ

ನೀಡಿ ನಮ್ಮ ಪರವಾಗಿ ಅದೇಶ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಆದೇಶದ ವಿರುದ್ಧ ಪ್ರತಿವಾದಿಗಳು ಪ್ರಕರಣ ಸಂಖ್ಯೆ 71/2009-10 ರಂತೆ ಮಾನ್ಯ ಜಿಲ್ಲಾಧಿಕಾರಿಗಳ ಎದುರು ಪ್ರಶ್ನೆ ಮಾಡಿರುತ್ತಾರೆ ಎಂದರೆ ಸರಿ. ಅಸಲು ದಾವಾಸಂಖ್ಯೆ 763/2007 ಚಾಲ್ತಿಯಲ್ಲಿರುವ ಕಾರಣ ಮಾನ್ಯ ಜಿಲ್ಲಾಧಿಕಾರಿಗಳು ಸದರಿ ಪ್ರಕರಣವನ್ನು ವಿಲೇ ಮಾಡಿರುತ್ತಾರೆ ಎಂದರೆ ಸರಿ. ಸದರಿ ಎಲ್ಲಾ ಆದೇಶಗಳ ವಿರುದ್ಧ ರಿಟ್ ಅರ್ಜಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ ಎಂದರೆ ಸರಿ. ನಮಗೆ ದಾವಾಸ್ವತ್ತಿನ ಬಗ್ಗೆ ಹಕ್ಕು ಕೇಳಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಿ.ಪಿ.68 ರಲ್ಲಿ ನಮೂದಿಸಿದ ಎರಡು ಸ್ವತ್ತುಗಳ ಬಗ್ಗೆ ಇದೇ ನ್ಯಾಯಾಲಯದಲ್ಲಿ ಅಸಲು ದಾವಾಸಂಖ್ಯೆ 829/2019 ಮತ್ತು ಅಸಲು ದಾವಾ ಸಂಖ್ಯೆ 1172/2022 ಚಾಲ್ತಿಯಲ್ಲಿದೆ ಎಂದರೆ ಸರಿ. ನಿ.ಪಿ.68 ರ ಸ್ವತ್ತುಗಳು ನಮ್ಮ ಸ್ವತ್ತುಗಳು ಅಲ್ಲ, ಸದರಿ ದಾವೆಯಲ್ಲಿ ಇರುವ ದಾಕ್ಷಾಯಿಣಿ ಮತ್ತು ಇತರರ ಸ್ವತ್ತುಗಳಾಗಿದ್ದು, ಈ ದಾವೆಯ ದಾವಾಸ್ವತ್ತಿಗೆ ಚೆಕ್ಕುಬಂದಿಯನ್ನು ತೋರಿಸಲು ಪೂರಕವಾಗಿ ನಿ.ಪಿ.68 ನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಬಗ್ಗೆ ನಮ್ಮ ತಂದೆ ನಮ್ಮ ಮಾವ ಮುನೇಗೌಡ ಅವರಿಗೆ ನೋಂದಾಯಿತ ಕರಾರುಪತ್ರ ಮಾಡಿಕೊಟ್ಟಿದ್ದರು. ನಮಗೆ ಹಕ್ಕು ಇಲ್ಲದೇ ಇದ್ದರೂ ಸಹ ನಮ್ಮ ತಂದೆ ದಾವಾಸ್ವತ್ತನ್ನು ಲಪಟಾಯಿಸಲು ಪ್ರಯತ್ನ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**(ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**